# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 632 (809) |
| ಸದಸ್ಯರ ಹೆಸರು | : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : 26.12.2022 |
| ಉತ್ತರಿಸುವ ಸಚಿವರು | : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ 6 ರಿಂದ 14 ವಯಸ್ಸಿನ ಮಕ್ಕಳು ಶಾಲೆಯಿಂದ ಹೊರ ಉಳಿದಿರುವ ಬಗ್ಗೆ ಸರ್ಕಾರ ಸಮೀಕ್ಷೆಯನ್ನು ನಡೆಸಲಾಗಿದೆಯೇ; ಹಾಗಿದ್ದಲ್ಲಿ, ಈ ಸಮೀಕ್ಷೆಯ ಪೂರ್ಣ ವಿವರ ನೀಡುವುದು; | ಹೌದು.<br><br>ರಾಜ್ಯದಲ್ಲಿ 6 ರಿಂದ 14 ವಯಸ್ಸಿನ ಮಕ್ಕಳ ಸಮೀಕ್ಷೆಯನ್ನು ನಡೆಸಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಗರಾಭಿವೃದ್ಧಿ ಮತ್ತು ಪೌರಾಡಳಿತ ಇಲಾಖೆಗಳ ಮೂಲಕ 2020-21ನೇ ಸಾಲಿನಲ್ಲಿ ಸಮೀಕ್ಷೆ ನಡೆಸಲಾಗಿದ್ದು, ರಾಜ್ಯದಲ್ಲಿ 6 ರಿಂದ 14 ವಯೋಮಾನದ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ಈ ಕೆಳಕಂಡಂತಿದೆ.<br><br>**ಕ್ರ.ಸಂ. / ಶಾಲೆಯಿಂದ ಹೊರಗುಳಿದ ಮಕ್ಕಳ ವಿವರ**<br>1. ಶಾಲೆಗೆ ದಾಖಲಾಗದ ಮಕ್ಕಳ ಸಂಖ್ಯೆ (6-14) — 14,290<br>2. ಶಾಲೆಬಿಟ್ಟ ಮಕ್ಕಳ ಸಂಖ್ಯೆ (6 ರಿಂದ 14) — 10,018<br>**ಒಟ್ಟು — 24,308** |
| ಆ) | ರಾಜ್ಯದಲ್ಲಿ ಶಾಲೆಯಿಂದ ಹೊರ ಉಳಿದಿರುವ ಬಹುತೇಕ ಮಕ್ಕಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಸಮುದಾಯಗಳಿಗೆ ಸೇರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಇ) | ರಾಜ್ಯದಲ್ಲಿ ಶಾಲೆಯಿಂದ ಹೊರ ಉಳಿದಿರುವ ಈ ಮಕ್ಕಳನ್ನು ಮರಳಿ ಶಾಲೆಗೆ ತರಲು ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು; ಇಂತಹ ಮಕ್ಕಳ ಕುಟುಂಬಕ್ಕೆ ಸರ್ಕಾರದಿಂದ ಆರ್ಥಿಕ ನೆರವು ನೀಡಲಾಗಿದೆಯೇ; (ಪೂರ್ಣ ವಿವರ ನೀಡುವುದು) | ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ನಿಯಮಗಳ ಕಾಯ್ದೆಯ ಸೆಕ್ಷನ್ 4ರ ರೀತ್ಯ 6 ರಿಂದ 14 ವರ್ಷದ ಯಾವ ಮಗುವೂ ಶಾಲೆಯಿಂದ ಹೊರಗುಳಿಯದಂತೆ ನೋಡಿಕೊಳ್ಳುವ ಸಲುವಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಉನ್ನತಾಧಿಕಾರ ಸಮಿತಿಯನ್ನು ರಚಿಸಲಾಗಿದೆ. ಅಲ್ಲದೆ, ಕಾಲಕಾಲಕ್ಕೆ ಅಂತಹ ಇಲಾಖಾ ಸಮನ್ವಯ ಸಮಿತಿ ಸಭೆಗಳನ್ನು ನಡೆಸಲಾಗುತ್ತಿದ್ದು, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಮೇಲ್ವಿಚಾರಣೆ ಮಾಡಲಾಗುತ್ತಿದೆ. ಅಲ್ಲದೆ, ಶಾಲೆಯಿಂದ ಹೊರ ಉಳಿದಿರುವ ಮಕ್ಕಳನ್ನು ಮರಳಿ ಶಾಲೆಗೆ ತರಲು ಸರ್ಕಾರವು ಈ ಕೆಳಕಂಡ ಕಾರ್ಯತಂತ್ರಗಳನ್ನು ರೂಪಿಸಿದೆ.<br><br>• 12 ತಿಂಗಳ ವಸತಿಯುತ ವಿಶೇಷ ತರಬೇತಿ (12 RST) |

| | | |
|---|---|---|
| | | • 6 ತಿಂಗಳ ವಸತಿ ರಹಿತ ವಿಶೇಷ ತರಬೇತಿ (6 NRST)<br>• ವಲಸಿತ ಕುಟುಂಬಗಳ ಮಕ್ಕಳಿಗಾಗಿ ವಿಶೇಷ ತರಬೇತಿ (ಟೆಂಟ್ ಶಾಲೆ) ( 6 RST<br>• ಶಾಲಾ ಆಧಾರಿತ ವಿಶೇಷ ತರಬೇತಿ (ಸ್ವಯಂ ಸೇವಕ ಸಹಿತ) (6 ತಿಂಗಳ ಅವಧಿಗೆ)<br>• 6 ತಿಂಗಳ ಋತುಮಾನ ವಸತಿಯುತ ಕೇಂದ್ರ (SRST)<br>• 3 ತಿಂಗಳ ವಸತಿ ಸಹಿತ ವಿಶೇಷ ತರಬೇತಿ ( 3 RST)<br>• 3 ತಿಂಗಳ ವಸತಿ ರಹಿತ ವಿಶೇಷ ತರಬೇತಿ ( 3 RST)<br><br>ಶಾಲೆಯಿಂದ ಹೊರಗುಳಿದ ಮಕ್ಕಳ ಕುಟುಂಬಕ್ಕೆ ಸರ್ಕಾರದಿಂದ ಆರ್ಥಿಕ ನೆರವು ನೀಡಿರುವುದಿಲ್ಲ. |
| ಈ) | ರಾಜ್ಯದಲ್ಲಿ ಶಾಲೆಯಿಂದ ಹೊರ ಉಳಿದಿರುವ ಮಕ್ಕಳ ಬಗ್ಗೆ ಇರುವ ದತ್ತಾಂಶವನ್ನು ಸರ್ಕಾರದ ಪೋರ್ಟಲ್‌ನಲ್ಲಿ ಅಳವಡಿಸಿದೆಯೇ? (ಹಾಗಿದ್ದಲ್ಲಿ, ಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿ ಶಾಲೆಯಿಂದ ಹೊರಗುಳಿದಿರುವ ಮಕ್ಕಳ ಬಗ್ಗೆ ಇರುವ ದತ್ತಾಂಶವನ್ನು **"ಶಿಕ್ಷಣ ಇಲಾಖಾ ವೆಬ್ ಸೈಟ್"** **(School Education Portal)**ನಲ್ಲಿ ಅಳವಡಿಸಲಾಗಿದೆ. ವಿವರವನ್ನು ಅನುಬಂಧದಲ್ಲಿ ಒದಗಿಸಿದೆ. |

**ಸಂಖ್ಯೆ: ಇಪಿ 104 ಪಿಎಂಎ 2022**

(ಬಿ.ಸಿ. ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು

## Samagra Shiksha Karnataka

### District wise Out of School Children Tracking Details

Updated as on 14/12/2022

| S.No | District | Total OOSC Children (6-14 yrs) | | | Tracking Details (6-14 years) | | | | | | | | | | | | |
|---|---|---|---|---|---|---|---|---|---|---|---|---|---|---|---|---|---|
| | | Total Children | Children Tracked | Pending for Tracking | Total | Admitted | Migrated | Child Marriage | Earning for family | Un healthy | Admitted to Open school | Admitted to Madarasa | Un willingness of parents | Death | Under Age | Over Age |
| 1 | BAGALKOTE | **543** | 540 | 3 | **540** | 479 | 11 | 0 | 0 | 17 | 2 | 5 | 0 | 7 | 0 | 19 |
| 2 | BALLARI | **934** | 847 | 87 | **847** | 637 | 44 | 0 | 0 | 32 | 1 | 21 | 0 | 9 | 0 | 103 |
| 3 | BBMP | **2993** | 739 | 2254 | **739** | 391 | 306 | 0 | 0 | 5 | 3 | 3 | 0 | 0 | 0 | 31 |
| 4 | BELAGAVI | **979** | 979 | 0 | **979** | 893 | 19 | 0 | 0 | 0 | 2 | 2 | 0 | 5 | 2 | 56 |
| 5 | BENGALURU | **454** | 362 | 92 | **362** | 293 | 46 | 0 | 0 | 0 | 1 | 1 | 0 | 2 | 0 | 19 |
| 6 | BENGALURU RURAL | **400** | 393 | 7 | **393** | 349 | 26 | 0 | 0 | 3 | 0 | 2 | 0 | 0 | 0 | 13 |
| 7 | BIDAR | **2235** | 2235 | 0 | **2235** | 1831 | 299 | 0 | 0 | 15 | 0 | 7 | 0 | 3 | 3 | 77 |
| 8 | CHAMARAJANAGARA | **310** | 304 | 6 | **304** | 220 | 10 | 0 | 0 | 1 | 0 | 29 | 0 | 2 | 1 | 41 |
| 9 | CHIKKABALLAPURA | **384** | 262 | 122 | **262** | 145 | 29 | 0 | 0 | 3 | 1 | 7 | 0 | 2 | 0 | 75 |
| 10 | CHIKKAMAGALURU | **392** | 383 | 9 | **383** | 359 | 11 | 0 | 0 | 3 | 0 | 0 | 0 | 0 | 1 | 9 |
| 11 | CHITRADURGA | **1222** | 1222 | 0 | **1222** | 1205 | 2 | 0 | 1 | 0 | 0 | 1 | 0 | 5 | 0 | 8 |
| 12 | DAKSHINA KANNADA | **132** | 131 | 1 | **131** | 124 | 0 | 0 | 0 | 0 | 2 | 0 | 0 | 0 | 0 | 5 |
| 13 | DAVANAGERE | **564** | 564 | 0 | **564** | 465 | 13 | 0 | 0 | 6 | 0 | 0 | 0 | 2 | 0 | 78 |
| 14 | DHARWAD | **1113** | 1113 | 0 | **1113** | 1000 | 29 | 0 | 0 | 13 | 4 | 2 | 0 | 3 | 2 | 60 |
| 15 | GADAG | **334** | 331 | 3 | **331** | 295 | 8 | 0 | 0 | 3 | 0 | 0 | 0 | 3 | 0 | 22 |
| 16 | HASSAN | **625** | 610 | 15 | **610** | 573 | 12 | 0 | 0 | 5 | 0 | 0 | 0 | 2 | 0 | 18 |
| 17 | HAVERI | **436** | 436 | 0 | **436** | 337 | 18 | 0 | 0 | 4 | 1 | 0 | 0 | 11 | 1 | 64 |
| 18 | KALABURAGI | **1707** | 1471 | 236 | **1471** | 990 | 75 | 0 | 0 | 51 | 1 | 2 | 0 | 7 | 1 | 344 |
| 19 | KODAGU | **237** | 237 | 0 | **237** | 174 | 48 | 0 | 0 | 1 | 6 | 0 | 0 | 2 | 0 | 6 |
| 20 | KOLAR | **276** | 276 | 0 | **276** | 241 | 24 | 0 | 0 | 0 | 1 | 1 | 0 | 2 | 0 | 7 |
| 21 | KOPPAL | **858** | 817 | 41 | **817** | 692 | 22 | 0 | 0 | 37 | 0 | 8 | 0 | 6 | 3 | 49 |
| 22 | MANDYA | **592** | 583 | 9 | **583** | 537 | 17 | 0 | 0 | 1 | 0 | 3 | 3 | 5 | 1 | 16 |
| 23 | MYSURU | **552** | 550 | 2 | **550** | 462 | 18 | 0 | 0 | 6 | 5 | 2 | 3 | 3 | 3 | 48 |
| 24 | RAICHUR | **1637** | 1637 | 0 | **1637** | 1321 | 221 | 0 | 1 | 5 | 0 | 3 | 0 | 5 | 2 | 79 |
| 25 | RAMANAGARA | **459** | 459 | 0 | **459** | 417 | 22 | 1 | 0 | 5 | 0 | 2 | 0 | 5 | 0 | 7 |
| 26 | SHIVAMOGGA | **690** | 686 | 4 | **686** | 602 | 10 | 0 | 0 | 9 | 0 | 1 | 0 | 7 | 2 | 55 |
| 27 | TUMAKURU | **706** | 692 | 14 | **692** | 626 | 12 | 0 | 1 | 22 | 1 | 6 | 0 | 5 | 2 | 17 |
| 28 | UDUPI | **128** | 128 | 0 | **128** | 118 | 5 | 0 | 0 | 1 | 0 | 0 | 0 | 2 | 1 | 1 |
| 29 | UTTARA KANNADA | **286** | 286 | 0 | **286** | 220 | 11 | 0 | 0 | 1 | 0 | 5 | 0 | 5 | 8 | 36 |
| 30 | VIJAYAPURA | **843** | 843 | 0 | **843** | 453 | 58 | 0 | 0 | 2 | 0 | 0 | 0 | 10 | 4 | 316 |
| 31 | YADGIR | **1287** | 1285 | 2 | **1285** | 809 | 385 | 0 | 0 | 6 | 0 | 7 | 0 | 7 | 0 | 71 |
| | **State Total** | **24308** | **21401** | **2907** | 21401 | **17258** | **1811** | **1** | **3** | **257** | **31** | **120** | **6** | **127** | **37** | **1750** |